ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 06–10–2017

# ಪತ್ರಿಕಾ ಪ್ರಕಟಣೆ

1. ಸಮಗ್ರ ಕೃಷಿ ಪದ್ದತಿ ರೈತ ಪ್ರಶಸ್ತಿ ಪ್ರದಾನ ಸಮಾರಂಭ:

ಉದ್ಘಾಟನೆ:
ಎ. ಮಂಜು,
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ದಿನಾಂಕ: 7–10–2017, ಶನಿವಾರ, ಸಮಯ: ಬೆಳಿಗ್ಗ 10–30 ಗಂಟೆಗೆ
ಸ್ಥಳ: ಡಾ: ಜಿ.ಕೆ. ವೀರೇಶ್ ಸಭಾಂಗಣ, ಹೆಬ್ಬಾಳ, ಬೆಂಗಳೂರು – 560 024

2. **State Level Bankers Committee-Karnataka**
   **Mudra Promotion Campaign**

   **Date: 7-10-2017, Friday at 12.00 Noon**
   **Venue: Jnanajyothi Auditorium, Central College,**
   **Opp. Kaveri Guest House, Palace Road, Bengaluru**

# ಪತ್ರಿಕಾ ಪ್ರಕಟಣೆ

ಸಂಖ್ಯೆ:151/271

## 64 ನೇ ಅಖಿಲ ಭಾರತ ಸಹಕಾರ ಸಪ್ತಾಹ

ಬೆಂಗಳೂರು, ಅಕ್ಟೋಬರ್ 06 ( ಕರ್ನಾಟಕ ವಾರ್ತೆ) :

64 ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ನವೆಂಬರ್ 14 ರಿಂದ 20 ರವರೆಗೆ 7 ದಿನಗಳ ಕಾಲ ವಿವಿಧ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ನವೆಂಬರ್

14 ರಂದು ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಪ್ತಾಹವನ್ನು ಉದ್ಘಾಟಿಸುವರು ಎಂದು ಸಹಕಾರ ಸಚಿವ ರಮೇಶ್ ಜಾರಕಿಹೊಳಿ ಅವರು ತಿಳಿಸಿದರು.

ಇಂದು ವಿಕಾಸ ಸೌಧದಲ್ಲಿ ಹಮ್ಮಿಕೊಂಡಿದ್ದ ಸಪ್ತಾಹದ ಪೂರ್ವಭಾವಿ ಸಿದ್ದತಾ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು ಈ ಭಾರಿಯ ಸಪ್ತಾಹದ ಧ್ಯೇಯ "ಸಹಕಾರ ಸಂಸ್ಥೆಗಳನ್ನು ಗಣಕೀರಣಗೊಳಿಸುವ ಮೂಲಕ ಜನರ ಸಬಲೀಕರಣ" ಎಂದು ಘೋಷಿಸಿದ ಅವರು ಸಪ್ತಾಹದ 7 ದಿನಗಳಲ್ಲಿ 7 ವಿವಿಧ ವಿಷಯಗಳನ್ನಾಧರಿಸಿ ಕಾರ್ಯಕ್ರಮಗಳನ್ನು ಪ್ರತಿದಿನ ಬೇರೆ ಬೇರೆ 7 ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗುವುದು. ಸಮಾರೋಪ ಸಮಾರಂಭವನ್ನು ರಾಯಚೂರಿನಲ್ಲಿ ಹಮ್ಮಿಕೊಳ್ಳಲು ಸಭೆ ತೀರ್ಮಾನಿಸಿತು ಎಂದರು.

ಬೆಳಗಾವಿಯಲ್ಲಿ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಸಹಕಾರ ರತ್ನ ಪ್ರಶಸ್ತಿಗಳನ್ನು ಮುಖ್ಯಮಂತ್ರಿಗಳು ಪ್ರದಾನ ಮಾಡುವರು. ನವೆಂಬರ್ 14 ರಂದು ಸಹಕಾರ ಸಂಸ್ಥೆಗಳ ಮೂಲಕ ಉತ್ತಮ ಆಡಳಿತ ಮತ್ತು ವೃತ್ತಿಪರತೆ, ನವೆಂಬರ್ 15 ರಂದು ಸಹಕಾರ ಸಂಸ್ಥೆಗಳು ಉತ್ಪಾದಕರಿಂದ ಗ್ರಾಹಕರವರೆಗೆ, ನವೆಂಬರ್ 16 ರಂದು ಸಹಕಾರ ಅಭಿವೃದ್ಧಿಗೆ ಶಾಸನವನ್ನು ಸಶಕ್ತಗೊಳಿಸುವಿಕೆ, ನವೆಂಬರ್ 17 ರಂದು ಸಾರ್ವಜನಿಕ-ಖಾಸಗಿ- ಸಹಕಾರಿ ಸಹಭಾಗಿತ್ವ, ನವೆಂಬರ್ 18 ರಂದು ತಾಂತ್ರಿಕ ಜಾಗೃತಿ ಮತ್ತು ನಗದು ರಹಿತ ಪಾವತಿ ಮೂಲಕ ಆರ್ಥಿಕ ಸೇರ್ಪಡೆಯಾದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ, ನವೆಂಬರ್ 19 ರಂದು ಅವಕಾಶವಂಚಿತ ಮತ್ತು ಆರ್ಥಿಕ ಅಬಲವರ್ಗದವರಿಗಾಗಿ ಸಹಕಾರಿ ಸಂಸ್ಥೆಗಳು ಹಾಗೂ ನವೆಂಬರ್ 20 ರಂದು ಕೌಶಲ್ಯ ಅಭಿವೃದ್ಧಿಯಲ್ಲಿ ಸಹಕಾರ ಸಂಸ್ಥೆಗಳ ಪ್ರಮುಖ ಸಹಭಾಗಿತ್ವ ವಿಷಯಗಳನ್ನು ಆಧರಿಸಿ ಆಚರಣೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ಅಧ್ಯಕ್ಷ ಡಾ: ಶೇಖರ್‌ಗೌಡ ಮಾಲಿ ಪಾಟೀಲ್ ಅವರು ಮಾತನಾಡಿ 7 ದಿನಗಳ ಈ ಸಪ್ತಾಹವನ್ನು ಹಮ್ಮಿಕೊಳ್ಳಲು ವಿವಿಧ ಜಿಲ್ಲೆಗಳು ಈಗಾಗಲೇ 5 ದಿನಗಳ ಆಹ್ವಾನವನ್ನು ಒಪ್ಪಿಕೊಂಡಿದ್ದು ಇನ್ನೆರಡು ದಿನಗಳ ಕಾರ್ಯಕ್ರಮಗಳ ಸ್ಥಳಗಳನ್ನು ಶೀಘ್ರವಾಗಿ ತಿಳಿಸಲಾಗುವುದು. ನವೆಂಬರ್ 14 ರಂದು ಉದ್ಘಾಟನೆ ಬೆಳಗಾವಿ, ನವೆಂಬರ್ 15 ಮತ್ತು 16 ಸ್ಥಳಗಳನ್ನು ಅಂತಿಮಗೊಳಿಸಿಲ್ಲ. ನವೆಂಬರ್ 17 ಬಿಜಾಪುರ, ನವೆಂಬರ್ 18 ಶಿವಮೊಗ್ಗ, ನವೆಂಬರ್ 19 ಬೆಂಗಳೂರು ಹಾಗೂ ನವೆಂಬರ್ 20 ರಂದು ರಾಯಚೂರಿನಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕರುಗಳಾದ ಸೋಮಶೇಖರ್, ಎಸ್. ರವಿ, ಮಹಾಮಂಡಲದ ಉಪಾಧ್ಯಕ್ಷರಾದ ನಾಗರಾಜ್ ಸೇರಿದಂತೆ ಸಹಕಾರ ಇಲಾಖೆಯ ಉನ್ನತಾಧಿಕಾರಿಗಳು ಉಪಸ್ಥಿತರಿದ್ದರು.

**ಸಂಖ್ಯೆ:152/272**

# ಕೃಷಿ ಮೇಳ –2017

**ಬೆಂಗಳೂರು, ಅಕ್ಟೋಬರ್ 06 ( ಕರ್ನಾಟಕ ವಾರ್ತೆ) :**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಕೃಷಿ ಮೇಳವನ್ನು ನವೆಂಬರ್ 16 ರಿಂದ 19ರ ವರೆಗೆ ಆಯೋಜಿಸಿದೆ.

ಈ ಕೃಷಿ ಮೇಳದಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಸರ್ಕಾರಿ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಅಭಿವೃದ್ಧಿ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾನಿಲಯಗಳು, ಹಣಕಾಸು ಸಂಸ್ಥೆಗಳು, ಬಿತ್ತನೆ ಬೀಜ ಸಂಸ್ಥೆಗಳು, ಕೃಷಿ ಉಪಕರಣ ತಯಾರಕರು, ಪಶು ಸಂಗೋಪನಾ ಸಂಸ್ಥೆಗಳು, ಕೃಷಿ ಪರಿಕರಗಳ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತಿತರೆ ಸರ್ಕಾರಿ, ಅರೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಭಾಗವಹಿಸಲಿವೆ.

ಆಸಕ್ತಿಯುಳ್ಳ ಸಂಸ್ಥೆಗಳು/ಉದ್ದಿಮೆದಾರರು, ಮಳಿಗೆಗಳನ್ನು 5 ನೇ ನವೆಂಬರ್ 2017 ರ ಒಳಗೆ ಕಾಯ್ದಿರಿಸಿಕೊಳ್ಳಬಹುದು. ಮೊದಲು ನೋಂದಾಯಿಸಿಕೊಂಡವರಿಗೆ ಆದ್ಯತೆಯನ್ನು ನೀಡಲಾಗುವುದು. ಈ ಕೃಷಿ ಮೇಳದಲ್ಲಿ ಸುಮಾರು 12–00 ಲಕ್ಷಕ್ಕಿಂತ ಅಧಿಕ ಸಂಖ್ಯೆಯ ರೈತಬಾಂಧವರು ಮತ್ತು ಕೃಷಿ ಆಸಕ್ತರು ಭಾಗವಹಿಸಲಿದ್ದಾರೆ.

ಹೆಚ್ಚಿನ ವಿವರಗಳಿಗೆ ಡಾ: ಕೆ. ನಾರಾಣಯ ಗೌಡ, ಸಹ ವಿಸ್ತರಣಾ ನಿರ್ದೇಶಕರು, ದೂರವಾಣಿ ಸಂಖ್ಯೆ 080–23620323/ 23516353 ಮೊಬೈಲ್ 9844055236 ಡಾ: ಪಳನಿಮುತ್ತು, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು. ಕೊಯ್ಲೋತ್ತರ ತಂತ್ರಜ್ಞಾನ, ಮೊಬೈಲ್ 9945254640 ಮತ್ತು ಡಾ: ಬಿ.ಎಲ್. ಚಿದಾನಂದ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಪ್ರಾಣಿಶಾಸ್ತ್ರ ಮೊಬೈಲ್ 9845188846 ಗೆ ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:153/273**

## ಪ್ರವಾಸ

ಬೆಂಗಳೂರು, ಅಕ್ಟೋಬರ್ 06 ( ಕರ್ನಾಟಕ ವಾರ್ತೆ) :

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್ ಅವರು ಅಕ್ಟೋಬರ್ 6 ರಿಂದ 13 ರವರೆಗೆ ಕಲಬುರಗಿ, ಯಾದಗಿರ ಮತ್ತು ವಿಜಯಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:154/274**

## ಆಧಾರ್/ಮೊಬೈಲ್/ಪ್ಯಾನ್ ಸಂಖ್ಯೆಗಳನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ಖಾತೆಗಳಿಗೆ ಜೋಡಿಸುವ 'ವಿಶೇಷ ಕಾರ್ಯಕ್ರಮ'

ಬೆಂಗಳೂರು, ಅಕ್ಟೋಬರ್ 06 ( ಕರ್ನಾಟಕ ವಾರ್ತೆ) :

ಅಂಚೆ ಇಲಾಖೆಯು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ಖಾತೆಗಳಿಗೆ ಆಧಾರ/ಮೊಬೈಲ್/ಪ್ಯಾನ್ ಸಂಖ್ಯೆಗಳನ್ನು ಜೋಡಿಸಲು ಒಪ್ಪಿಗ ಪತ್ರ ಪಡೆಯುವ ಪ್ರಕ್ರಿಯೆಯಲ್ಲಿ ತೊಡಿಗಿದೆ. ಆಧಾರ್/ಮೊಬೈಲ್/ಪ್ಯಾನ್ ಸಂಖ್ಯೆಗಳನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ಖಾತೆಗಳಿಗೆ ಜೋಡಿಸುವ ಕಾರ್ಯವನ್ನು ಪೂರ್ಣಗೊಳಿಸಲು 2017 ಅಕ್ಟೋಬರ್ ತಿಂಗಳಲ್ಲಿ "ವಿಶೇಷ ಕಾರ್ಯಕ್ರಮ" ಹಮ್ಮಿಕೊಂಡಿದೆ.

ಹಾಗಾಗಿ, ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನ ಎಲ್ಲಾ ಗ್ರಾಹಕರು ತಮ್ಮ ಖಾತೆಗಳನ್ನು ತೆರೆದಿರುವ ಪೋಸ್ಟ್ ಆಫೀಸುಗಳಿಗೆ ಆಧಾರ್ ಪ್ರತಿಯೊಂದಿಗೆ ಭೇಟಿ ನೀಡಿ, ಆಧಾರ್/ಮೊಬೈಲ್/ಪ್ಯಾನ್ ಸಂಖ್ಯೆಗಳ ಮಾಹಿತಿಯನ್ನು ನಿಗದಿತ ಒಪ್ಪಿಗೆ ಪತ್ರದಲ್ಲಿ ನೀಡಲು ಕೋರಲಾಗಿದೆ. ಇದರ ಜೊತೆ ಆಧಾರ್ ಸಂಪರ್ಕಿತ ಖಾತೆಯೊಂದಿಗೆ ಅಥವಾ ಗ್ರಾಹಕ ಮಾಹಿತಿ ಫಾರಂನಲ್ಲಿ (ಸಿ.ಐ.ಎಫ್) ತಮ್ಮ ಹೆಸರಿನಲ್ಲಿರುವ ಅಂಚೆ ಇಲಾಖೆಯ ಇತರೆ ಉಳಿತಾಯ ಖಾತೆಗಳನ್ನು ಜೋಡಿಸಲು ಕೋರಲಾಗಿದೆ.

**ಸಂಖ್ಯೆ:155/275**

## Aadhaar/Mobile/Pan numbers to link it to their respective Post Office Savings Bank Accounts

**Bengaluru, Oct 6 (Karnataka Information)**

**Department of Posts is in the process of collecting the mandate for Aadhar/Mobile/PAN numbers to link it to their respective Post Office Savings Bank accounts.**

**In order to complete the task of linking Aadhaar numbers and Mobile numbers with Post Office savings Bank Accounts, a special drive is being conducted in October 2017. All Post Office Savings Bank customers are requested to visit their post offices where the accounts have been opened with a copy of Aadhaar and furnish a mandate in the prescribed form for linking Aadhaar/PAN/Mobile numbers and linking of several Accounts with Aadhar Linked account or Customer information form (CIF) number.**

**ಸಂಖ್ಯೆ:156/276**

## ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಗೆ ಜಾರ್ಜ ಎಸ್. ಫರ್ನಾಂಡೀಸ್ ನೇಮಕ

ಬೆಂಗಳೂರು, ಅಕ್ಟೋಬರ್ 06 ( ಕರ್ನಾಟಕ ವಾರ್ತೆ) :

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸದಸ್ಯರ ಸ್ಥಾನಕ್ಕೆ ಜಾರ್ಜ ಎಸ್. ಫರ್ನಾಂಡೀಸ್, ಫೌಂಡರ್ ಚೇರ್ಮನ್, ಸೇಂಟ್ ಮಿಲಾಗ್ರೇಸ್ ಕ್ರೆಡಿಟ್ ಸೌಹಾರ್ದ ಕೋ-ಆಪ್ ಲಿ. ಕಾರವಾರ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.